ವಿಷಯ : ರಾಜ್ಯದಲ್ಲಿನ ಆಸ್ಪತ್ರೆಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 182 (786)

ಶ್ರೀ. ಕೆ. ಭೀಮಣ್ಣ (ಕಲ್ಮಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳು ಮತ್ತು ಕೇಂದ್ರಗಳು ಸಮುದಾಯ ಆರೋಗ್ಯ ಕೇಂದ್ರಗಳು ಸಾರ್ವಜನಿಕ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ರಾಯಚೂರು ಜಿಲ್ಲೆಯಲ್ಲಿ ಯಾವ ಯಾವ ಪ್ರಾ. ಆ. ಘಟಕ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಂತ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿಯಾಗಿವೆ. ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಡಾ : ಎ. ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ ಆಸ್ಪತ್ರೆಗಳ ಸಂಖ್ಯೆ :

ಪ್ರಾ. ಆ. ಘಟಕ	-	622
ಪ್ರಾ. ಆ. ಕೇಂದ್ರ	-	1379
ಸಮುದಾಯ ಆರೋಗ್ಯ ಕೇಂದ್ರ	-	80
ಸಾರ್ವಜನಿಕ ಆಸ್ಪತ್ರೆಗಳು	-	133

(ಜಿಲ್ಲಾವಾರು ಅಂಕಿ ಅಂಶ ಅನುಬಂಧದಲ್ಲಿ ನೀಡಲಾಗಿದೆ)

ಆ) ರಾಯಚೂರು ಜಿಲ್ಲೆಯಲ್ಲಿ ಈ ಕೆಳಕಂಡ ಪ್ರಾ. ಆ. ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಂತ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿಯಿವೆ.

1. ಸಿಎಲ್ ಆಸ್ಪತ್ರೆ,	ಕೊಪ್ಪಳ	- 1
2. -''-	ಸಿಂಧನೂರು	- 1
3. -''-	ಲಿಂಗಸುಗೂರು	- 1
4. ಸಾರ್ವಜನಿಕ ಆಸ್ಪತ್ರೆ,	ಗಂಗಾವತಿ	- 1
5. -'' -	ಮಾನ್ವಿ	- 1
6. -''-	ದೇವದುರ್ಗ	-1
7. -''-	ಯಲಬುರ್ಗ	-1

ಮೇಲ್ಕಂಡ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಹೊಸದಾಗಿ ನೇಮಕವಾಗುವ ದಂತ ಚಿಕಿತ್ಸಕರುಗಳಿಂದ ಮತ್ತು ಸ್ನಾತಕೋತ್ತರ ವ್ಯಾಸಂಗ ಮುಗಿಸಿಕೊಂಡು ಬರುವ ದಂತ ವೈದ್ಯಾಧಿಕಾರಿಗಳಿಂದ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ರಾಜ್ಯದಲ್ಲಿನ ಪ್ರಾಥಮಿಕ ಆರೋಗ್ಯ ಘಟಕ ಪ್ರಾಥಮಿಕ ಅರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಜಿಲ್ಲಾವಾರು ಅಂಕಿಅಂಶಗಳು.

ಕ್ರ ಸಂ.	ಜಿಲ್ಲೆ	ಪ್ರಾ. ಅ. ಘಟಕ	ಪ್ರಾ.ಅಕೇಂದ್ರ	ಸ.ಅ.ಕೇಂದ್ರ	ಸಾರ್ವಜನಿಕ ಆಸ್ಪತ್ರೆ
1.	ಬೆಂಗಳೂರು ನಗರ	44	28	3	–
2.	ಬೆಂಗಳೂರು ಗ್ರಾಮಾಂತರ	31	58	4	5
3.	ಚಿತ್ರದುರ್ಗ	51	70	3	8
4.	ಕೋಲಾರ	37	70	4	6
5.	ಶಿವಮೊಗ್ಗ	52	64	3	6
6.	ತುಮಕೂರು	40	81	5	5
7.	ಬೆಳಗಾವಿ	3	113	5	8
8.	ಬಿಜಾಪುರ	5	85	7	9
9.	ಧಾರವಾಡ	34	88	13	7
10.	ಉತ್ತರ ಕನ್ನಡ	12	51	3	8
11.	ಬಳ್ಳಾರಿ	28	48	1	6
12.	ಬೀದರ್	3	36	1	4
13.	ಗುಲ್ಬರ್ಗಾ	30	84	7	10
14.	ರಾಯಚೂರು	3	69	4	8
15.	ಚಿಕ್ಕಮಗಳೂರು	42	42	1	5
16.	ದಕ್ಷಿಣ ಕನ್ನಡ	16	116	4	8
17.	ಹಾಸನ	53	65	6	7
18.	ಕೊಡಗು	–	28	–	7
19.	ಮಂಡ್ಯ	3	57	2	6
20.	ಮೈಸೂರು	80	119	4	10
	ಒಟ್ಟು	22	1379	80	133